# ಪ್ರವಾಸ








## ಕಿಟ್ ಬ್ಯಾಗ್‌ನಲ್ಲಿ ಏನೆಲ್ಲ ..?

ಸ್ವಚ್ಛತೆಯ ಕಾರಣಕ್ಕೆ ಊಟ, ತಿಂಡಿ ಮಾಡಲು ನಾವೇ ಪ್ಲೇಟ್, ಲೋಟ ಒಯ್ಯಬೇಕು. ಚಳಿಯಿಂದ ರಕ್ಷಿಸಿಕೊಳ್ಳಲು ಜಾಕೆಟ್, ಹೆಡ್ ಟಾರ್ಚ್ (ನಸುಕಿನ ನಡಿಗೆಗೆ ಬೇಕು), ಟಿಶ್ಯು, ಎರಡು ನೀರಿನ ಬಾಟಲಿ, ಎನರ್ಜಿ ಬಾರ್, ಪೆಪ್ಪರ್‌ಮಿಂಟ್‌ನಂತಹ ಶಕ್ತಿವರ್ಧಕ, ಕ್ಯಾಮೆರಾ ಎಲ್ಲ ಸೇರಿ ಸುಮಾರು 8–10 ಕೆ.ಜಿ.ಯಷ್ಟಾಗುತ್ತದೆ. ಸ್ನ್ಯಾಕ್ಸ್ ತರದಿದ್ದರೆ ಉತ್ತಮ. ಮ್ಯೂಲ್ ಪ್ರಾಣಿಯ ಬೆನ್ನ ಮೇಲೆ ಹೊರಿಸಿದರೆ, ಅದರ ವೆಚ್ಚವನ್ನು ನಾವೇ ಭರಿಸಬೇಕು.

## ಶೌಚಾಲಯ ಹೇಗೆ ?

ಟ್ರೆಕ್ಕಿಂಗ್ ಮೊದಲ ದಿನ ಹೊರಟರೆ, ಮರಳಿ ಬಂದ ಮೇಲೆ ಸ್ನಾನ ಮಾಡಲು ಸಾಧ್ಯವಾಗುವುದು. ಮುಖ ಮಾತ್ರ ತೊಳೆಯಬಹುದಷ್ಟೇ. ಬಹುತೇಕ ಕ್ಯಾಂಪ್‌ಗಳಲ್ಲಿ ಡ್ರೈ ಶೌಚಾಲಯಗಳಿರುತ್ತವೆ. ಹೊಂಡದಲ್ಲಿ ನಿತ್ಯಕರ್ಮ ಮುಗಿಸಿ, ಮಣ್ಣು ಮುಚ್ಚಿದರಾಯಿತು. ಪುರುಷರು, ಸ್ತ್ರೀಯರಿಗೆ ಪ್ರತ್ಯೇಕ ವ್ಯವಸ್ಥೆ ಇರುತ್ತದೆ.

## ಖರ್ಚು–ವೆಚ್ಚ

ಒಂದು ಟ್ರೆಕ್ಕಿಂಗ್ ತಂಡದಲ್ಲಿ 20–25 ಜನರಿಗೆ ಮಾತ್ರ ಅವಕಾಶ. ಎಂಟು ದಿನಗಳ ಟ್ರೆಕ್ಕಿಂಗ್ ವೆಚ್ಚ ಸುಮಾರು ₹ 11ಸಾವಿರ ಮತ್ತು ತೆರಿಗೆ. ವಿಮಾನ ಉಳಿದೆಲ್ಲ ವೆಚ್ಚ ಸೇರಿ ₹ 25ಸಾವಿರ ಖರ್ಚಾಗಬಹುದು.

# ರೂಪ್‌ಕುಂಡ್

## ಹಿಮದ ಮೇಲಿನ ಹೆಜ್ಜೆಗಳು

ಉತ್ತರಖಂಡ ರಾಜ್ಯದ ರೂಪ್‌ಕುಂಡ್ ಅದ್ಭುತ ಚಾರಣದ ತಾಣ. ನಾಲ್ಕೈದು ದಿನಗಳ ಕಾಲ ಹಿಮದಲ್ಲಿ ಹೆಜ್ಜೆ ಹಾಕುವ, ಟೆಂಟ್‌ಗಳಲ್ಲಿ ವಾಸ್ತವ್ಯದ ಅನುಭವ ವರ್ಣಿಸಲಸದಳ.



ಅಕ್ಷಯ ಯಾಜಿ

ಮೂರು ವರ್ಷಗಳ ಹಿಂದೆ ಸ್ನೇಹಿತನೊಬ್ಬ ಉತ್ತರಖಂಡ ರಾಜ್ಯದ ರೂಪ್‌ಕುಂಡ್‌ಗೆ ಟ್ರೆಕ್ಕಿಂಗ್ ಹೋಗಿದ್ದ ಫೋಟೊಗಳನ್ನು ತೋರಿಸಿದಾಗಲೇ ನಾನು ಮತ್ತು ಸ್ನೇಹಿತ ಪ್ರಭಾತ್ ಅಲ್ಲಿಗೆ ಹೋಗಲೇಬೇಕೆಂದು ನಿರ್ಧರಿಸಿದ್ದೆವು. ಬಿಡುವಿದ್ದಾಗಲೆಲ್ಲ ಒಂದೇ ಕೆಲಸ, ಇಂಟರ್‌ನೆಟ್‌ನಲ್ಲಿ ಟ್ರೆಕ್ಕಿಂಗ್ ಹುಡುಕಾಟ. ಎರಡು ತಿಂಗಳು ಇದೇ ಕೆಲಸ ಮಾಡಿದ ಮೇಲೆ 'ಇಂಡಿಯಾ ಹೈಕ್ಸ್' ಸಂಸ್ಥೆಯಲ್ಲಿ ಟಿಕೆಟ್ ಬುಕ್ ಮಾಡಿದ್ದೂ ಆಯಿತು. ನಮ್ಮಿಬ್ಬರ ಉತ್ಸಾಹ ಕಂಡು, ರಾಮಚಂದ್ರ ಭಟ್ಟ, ಪ್ರಶಾಂತ ಕೂಡ ನಮ್ಮ ಜೊತೆ ಸೇರಿದರು.

ದಿನದ ಬಹುಹೊತ್ತು ಸಿಲಿಕಾನ್ ಸಿಟಿ ಬೆಂಗಳೂರಿನ ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತು ಕೆಲಸ ಮಾಡುವ ನಾವು ನಾಲ್ವರು ಎಂಜಿನಿಯರ್‌ಗಳು 15 ದಿನ ರಜೆ ಹಾಕಿ ಮೇ ತಿಂಗಳಿನಲ್ಲಿ ಹೊರಟೇ ಬಿಟ್ಟೆವು. ಬೆಂಗಳೂರಿನಿಂದ ವಿಮಾನದಲ್ಲಿ ದೆಹಲಿಗೆ ಪ್ರಯಾಣಿಸಿ, ಅಲ್ಲಿಂದ ಸಂಪರ್ಕಕ್ರಾಂತಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಕಾಟ್ಗೋಧಾಮ್ ತಲುಪಿದೆವು.

ನಮ್ಮನ್ನು ಕರೆದೊಯ್ಯುವ ಇಂಡಿಯಾ ಹೈಕ್ಸ್‌ನವರು ಹೊರಡುವ ಪೂರ್ವದಲ್ಲೇ ಒಂದು ವಾಟ್ಸ್‌ಆ್ಯಪ್ ಗ್ರೂಪ್ ಮಾಡುತ್ತಾರೆ. ಅಲ್ಲಿ ನಮ್ಮ ಎಲ್ಲ ಅನುಮಾನಗಳನ್ನು ಪರಿಹರಿಸಿ ಕೊಳ್ಳಬಹುದು. ಆ ಗುಂಪಿನಲ್ಲಿದ್ದ ಎಲ್ಲರ ಮುಖ ಪರಿಚಯ ರೈಲ್ವೆ ಸ್ಟೇಷನ್‌ನಲ್ಲಿ ಆಯಿತು. ಬೆಂಗಳೂರಿನವರೇ ಕೆಲವರು, ಪಶ್ಚಿಮ ಬಂಗಾಳ, ಗುಜರಾತ್, ಮಹಾರಾಷ್ಟ್ರದಿಂದ ಬಂದವರು ನಮಗೆ ಜೊತೆಯಾದರು. ಅದು ಸುಮಾರು 10 ತಾಸಿನ ಪ್ರಯಾಣ, ಘಟ್ಟ ಪ್ರದೇಶದಲ್ಲಿ ಕಡಿದಾದ ತಿರುವುಗಳು ನಮಗೆ ಮುಂದಿನ ದುರ್ಗಮ ದಾರಿಯ ಸುಳಿವು ಕೊಡುತ್ತವೆ. ಎಲ್ಲ ಸೇರಿ ಪ್ರತ್ಯೇಕ ಜೀಪ್‌ನಲ್ಲಿ ರೂಪ್‌ಕುಂಡ್ ಪರ್ವತಾರೋಹಣದ ಮೊದಲ ಕ್ಯಾಂಪ್ ಶುರುವಾಗುವ ಲೋಹಾಜಂಗ್ ತಲುಪಿದೆವು.

ಇಲ್ಲಿಂದ ನಮ್ಮ ಖರ್ಚು–ವೆಚ್ಚದ ಎಲ್ಲ ಜವಾಬ್ದಾರಿ ಕರೆದೊಯ್ಯುವ ಕಂಪನಿಯದು. ದೇಹದ ರಕ್ತದೊತ್ತಡ, ಹೃದಯ ಬಡಿತ, ಆಮ್ಲಜನಕದ ಪ್ರಮಾಣ ಹೀಗೆ ಪರ್ವತಾರೋಹಿಯಾಗಲು ಅಗತ್ಯವಿರುವ ಎಲ್ಲ ಫಿಟ್‌ನೆಸ್ ಪರೀಕ್ಷೆ ಇಲ್ಲಿ ನಡೆಯುತ್ತದೆ. ಆಗಲೇ ನಮಗೊಂದು ಹೆಲ್ತ್ ಕಾರ್ಡ್ ಕೊಡುತ್ತಾರೆ. ದಿನಕ್ಕೆ ಮೂರು ಬಾರಿ ದೇಹಾರೋಗ್ಯ ಪರೀಕ್ಷೆ ಮಾಡಿ ಅದರಲ್ಲಿ ದಾಖಲಿಸುತ್ತಾರೆ. ಟ್ರೆಕ್ಕಿಂಗ್ ಟಿಪ್ಸ್‌ಗಳ ಬಗ್ಗೆ ಅರ್ಧ ಗಂಟೆ ಉಪನ್ಯಾಸವನ್ನೂ ಕೊಡುತ್ತಾರೆ. ಇದರ ಮರುದಿನ ನಮ್ಮ ಟ್ರೆಕ್ಕಿಂಗ್ ಶುರು. ನಮ್ಮ ನಿತ್ಯದ ಚಟುವಟಿಕೆಯ ಸಂಪೂರ್ಣ ನಿಯಂತ್ರಕರು ಅವರಾಗುತ್ತಾರೆ. ಊಟ, ತಿಂಡಿ, ರಾತ್ರಿ ಮಲಗುವ, ಬೆಳಿಗ್ಗೆ ಏಳುವ ಸಮಯ ನಿರ್ಧರಿಸುವವರು ಅವರೇ. ಯಾಕೆಂದರೆ ಅಲ್ಲಿನ ಹವಾಮಾನ ನಮಗೆ ಹೊಸತು, ಅವರಿಗೆ ಅದು ಬದುಕಿನ ಒಂದು ಭಾಗ.

ರಾತ್ರಿ ರೆಡಿ ಮಾಡಿಟ್ಟುಕೊಂಡಿದ್ದ ಕಿಟ್ ಬ್ಯಾಗ್ ಬೆನ್ನಿಗೆ ಹಾಕಿ ಹೊರಟೆವು. ವಾನ್‌ನಿಂದ ನಮ್ಮ ಜೊತೆಗೆ ಇಬ್ಬರು ಗೈಡ್ ಇದ್ದರು. ಒಬ್ಬರು ಮುಂದೆ, ಇನ್ನೊಬ್ಬರು ಕೊನೆಯಲ್ಲಿ ಇದ್ದರು. ಆ ದಾರಿ ಹಿಮ ಹೊದ್ದರೂ, 20 ವರ್ಷಗಳಿಂದ ಕಂಡ ಇವರ ಹೆಜ್ಜೆಯನ್ನು ಗುರುತಿಸಬಲ್ಲದು. ಅವರ ಟ್ರೆಕ್ಕಿಂಗ್ ಕತೆಗಳ ರೋಚಕ ಅನುಭವ ಕೇಳುತ್ತಿದ್ದರೆ, ಆಯಾಸವೂ ಮರೆತು ಹೋಗುತ್ತಿತ್ತು. ಒಂದು ತಾಸು ಗುಡ್ಡದ ನಡಿಗೆ, ಮತ್ತೆ ಅರ್ಧ ಗಂಟೆ ಬಿಡುವು. ಅಲ್ಲೇ ಅಂಗಡಿಯಲ್ಲಿ ಟೀ ಕುಡಿದು, ನೀರಿನ ಸೆಲೆಯಿದ್ದಲ್ಲಿ ಹೋಗಿ, ಬಾಟಲಿಯಲ್ಲಿ ನೀರು ತುಂಬಿಸಿಕೊಂಡೆವು. ಆ ದಿನಕ್ಕೆ ನೀರು ಸಿಗುವ ಜಾಗ ಇದೊಂದೇ ಎಂದು ಅವರು ಮೊದಲೇ ಸೂಚನೆ ನೀಡಿದ್ದರು. ಕಾಲಿನ ಸಾಮರ್ಥ್ಯ ಗೊತ್ತಾಗುವುದೇ ಇಲ್ಲಿಂದ. ಕಡಿದಾದ ದಾರಿಯಲ್ಲಿ ಕಣ್ಣು ಮತ್ತು ಕಾಲಿಗೆ ಮಾತ್ರ ಕೆಲಸ.

ಅಂತೂ ಮೊದಲ ಕ್ಯಾಂಪ್ ಫೈರೋಲಿಪಾತಲ್ ಸೇರಿದೆವು. ಟ್ರೆಕ್ಕಿಂಗ್ ಆರಂಭದಿಂದ ಕೊನೆಯವರೆಗೂ ತರಕಾರಿ ಊಟ ಮಾತ್ರ. ಮದ್ಯಪಾನ, ಸಿಗರೆಟ್ ಸೇವನೆ ಕಡ್ಡಾಯ ನಿಷೇಧ. ನಡಿಗೆಯಿಂದ ದಣಿದ ದೇಹ ರಾತ್ರಿ ಎಂಟಾದರೆ ನಿದ್ದೆಗೆ ಜಾರಿಬಿಡುತ್ತದೆ. ರಾತ್ರಿ ಸುಖ ನಿದ್ರೆ ಬರಲೆಂದೇ ನಮ್ಮ ಗೈಡ್‌ಗಳು ಮಧ್ಯಾಹ್ನ ನಿದ್ದೆ ಮಾಡಲು ಬಿಡುತ್ತಿರಲಿಲ್ಲ. ಎರಡನೇ ದಿನವಿಡೀ ಕಾಡಿನ ಒಡನಾಟ. ಮುಗಿಲಿಗೆ ಮುಖ ಮಾಡಿದ ಮರಗಳು ನಮಗೆ ನೆರಳಾಗುತ್ತವೆ. ಮುಂದೆ ಜಗತ್ತೇ ಹಸಿರಾಗಿ ಕಾಣುವ ಹುಲ್ಲುಗಾವಲು. ಮೊದಲ ದಿನವೇ ಮೌಂಟ್ ತ್ರಿಶೂಲ್ ಕಂಡಿದ್ದೆವು. ಪ್ರತಿ ದಿನವೂ ಕಾಣುವ ಪರ್ವತಗಳ ಸಾಲು ನಮ್ಮ ನಡಿಗೆಗೆ ಉತ್ಸಾಹ ತುಂಬುತ್ತಿದ್ದವು. ನಾವು ಅದರ ಹತ್ತಿರ ಹತ್ತಿರಕ್ಕೆ ಹೋದಂತೆ ಭಾಸವಾಗುತ್ತಿತ್ತು. ಹೀಗೆ ನಡೆಯುತ್ತಾ ಅಲಿಬುಗಿಯಾಲ್ ತಲುಪಿದೆವು. ಅಲ್ಲಿ 360 ಡಿಗ್ರಿ ಸುತ್ತ ನೋಡುವುದೇ ಸೊಬಗು.

ಎರಡನೇ ದಿನದ ಕ್ಯಾಂಪ್ ಬೇದ್ನಿಬುಗ್ಯಾಲ್. ಇಲ್ಲಿ ಆಮ್ಲಜನಕದ ಪ್ರಮಾಣ ತೀರಾ ಕಡಿಮೆ. ಹತ್ತು ಹೆಜ್ಜೆ ನಡೆದರೂ ಪ್ರಯಾಸವೇ. ಒಳ್ಳೆಯ ಬಿಸಿಲಿನ ವಾತಾವರಣದಲ್ಲಿ ಮಜಾ ಮಾಡಿದೆವು. ಸಂಜೆ ಒಮ್ಮೆಲೇ ಮೋಡ ಕವಿಯಿತು. ಎಲ್ಲರೂ ಟೆಂಟ್ ಒಳಗೆ ಸೇರುವಂತೆ ಗೈಡ್‌ಗಳು ನಿರ್ದೇಶಿಸಿದರು. ಪ್ರಳಯವಾಗುವಷ್ಟು ಮಳೆ, ಪಕ್ಕದ ಟೆಂಟ್ ಹಾರಿ ಹೋಯಿತು. ಒಂದೇ ಟೆಂಟ್‌ನಲ್ಲಿ ನಾಲ್ಕೈದು ಜನ ಕುಳಿತೆವು. ಅಲ್ಲಿಗೇ ನಮಗೆ ಊಟ ತಂದುಕೊಟ್ಟರು. ಗುಡ್ಡದಲ್ಲಿ ಬಿಸಿಲು ಮಳೆಯಾಟ ಹೊಸತಲ್ಲ. ಆದರೆ, ಇದು ಮಾತ್ರ ಇಡೀ ಟ್ರೆಕ್ಕಿಂಗ್‌ನ ಭಯದ ಸುಖಾನುಭವ.



ಮೂರನೇ ದಿನ ಇದು ಹೊಂದಿಕೊಳ್ಳುವ ದಿನ. ಎತ್ತರದ ಹವಾಮಾನಕ್ಕೆ ದೇಹವನ್ನು ಒಗ್ಗಿಸಲು ಬೇದ್ನಿಟಾಪ್ ಏರಬೇಕು. ಅಲ್ಲಿ ಕನಿಷ್ಠ ಮೂರು ತಾಸು ಕುಳಿತುಕೊಳ್ಳಬೇಕು. ತಿರುಗಿ ಬೇದ್ನಿಬುಗ್ಯಾಲ್‌ಗೆ ಬಂದರೆ ಅಲ್ಲಿಯೇ ಪೂರ್ಣ ವಿಶ್ರಾಂತಿ. ನಾಲ್ಕನೇ ದಿನ ಪಾತರ್ ನಚೋನಿ, ಐದನೇ ದಿನ ಬಗ್ವಾಬಾಸಾ. ಅಲ್ಲೊಂದು ಹಿಮ ಮೆತ್ತಿಕೊಂಡ ಕಲ್ಲು ವಿನಾಯಕನಿದ್ದಾನೆ. ಅವನ ದರ್ಶನ ಪಡೆದ ಮೇಲೆ ಮುಂದಿನದೆಲ್ಲ ಹಿಮ ಪ್ರಪಂಚ. ಹಿಮದಾಟದಲ್ಲಿ ಮಿಂದೆದ್ದು ಅಲ್ಲಿಯೇ ತಂಗಿದೆವು. ಮರುದಿನ ಹಿಮ ಕರಗಲು ಶುರುವಾಗುವ ಮುನ್ನ, ನಸುಕಿನ 3.30ಕ್ಕೆ ಎದ್ದು ನವ ಉತ್ಸಾಹದಲ್ಲಿ ದಾರಿ ಕ್ರಮಿಸಿ, ಸಮುದ್ರ ಮಟ್ಟಕ್ಕಿಂತ 4800 ಮೀಟರ್ ಎತ್ತರದಲ್ಲಿರುವ ರೂಪ್‌ಕುಂಡ್ ಸಮಿಟ್ ಪಾಯಿಂಟ್‌ನಲ್ಲಿ ಅಡಿಯಿಟ್ಟೆವು!

ರೂಪ್‌ಕುಂಡ್ ತುದಿ ತಲುಪಿದಾಗ ಅಲ್ಲಿ ಮೈನಸ್ ಐದು ಡಿಗ್ರಿ ತಾಪಮಾನ. ಗಡಗುಡುವ ಚಳಿಯಲ್ಲೂ ಮನಸ್ಸು ಬೆಚ್ಚನೆಯ ಕನಸು ನನಸಾಗಿದ್ದನ್ನು ಅನುಭವಿಸುತಿತ್ತು. ಬಸವಳಿದು ಪ್ರತಿ ಹೆಜ್ಜೆ ಮುಂದಿಡುವಾಗ ಕೂಡಿಟ್ಟ ಖುಷಿಯೆಲ್ಲ ಇಲ್ಲಿ ಗರಿಬಿಚ್ಚಿ ಹಾರಾಡಿದವು. ಗ್ಲೌಸ್‌ನ ಮುಷ್ಠಿಯೊಳಗೆ 'Done Roopkund' ಬೋರ್ಡ್ ಹಿಡಿದು ಫೋಟೊ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದ್ದು ಮರೆಯಲಾರದ ಕ್ಷಣ.

ನಿರೂಪಣೆ: ಸಂಧ್ಯಾ ಹೆಗಡೆ ಆಲ್ಮನೆ



# ದೆಹಲಿಯಲ್ಲಿ ಟುಸಾಡ್ಸ್ ಮ್ಯೂಸಿಯಂ



ಬಾಲಿವುಡ್ ನಟಿ ಕತ್ರಿನಾ ಕೈಫ್ ಅವರ ಮೇಣದ ಪ್ರತಿಕೃತಿ

**ಡಿಸೆಂಬರ್ 1, 2017** ರಂದು ದೆಹಲಿಯ ಕನ್ನಾಟ್ ಪ್ಲೇಸ್ ನಲ್ಲಿರುವ ರೀಗಲ್ ಕಟ್ಟಡದಲ್ಲಿ ಮೇಡಮ್ ಟುಸ್ಯಾಡ್ಸ್ ಮ್ಯೂಸಿಯಂ ಆರಂಭವಾಗಿದೆ.



ಕಪಿಲ್ ಬೌಲಿಂಗ್, ಕೊಯ್ಲಿ ಬ್ಯಾಟಿಂಗ್

ಚಿತ್ರಗಳು: ಲೇಖಕರವು

## ತಲುಪುವುದು ಹೇಗೆ?

ದೆಹಲಿಯ ಕನ್ನಾಟ್ ಪ್ಲೇಸ್‌ನಲ್ಲಿ ದೆಹಲಿ ಮೆಟ್ರೋದ ಯೆಲ್ಲೋ ಮತ್ತು ಬ್ಲೂ ಲೈನ್ ಸೇರುವ ಸುಪ್ರಸಿದ್ಧ ರಾಜೀವ್‌ಗಾಂಧಿ ನಿಲ್ದಾಣವಿದೆ. ಇಲ್ಲಿಂದ 5-10 ನಿಮಿಷಗಳ ನಡಿಗೆಯಲ್ಲಿ ರೀಗಲ್ ಬಿಲ್ಡಿಂಗ್ ತಲುಪಬಹುದು. ಕನ್ನಾಟ್ ಪ್ಲಸ್‌ಗೆ ದೆಹಲಿಯ ಎಲ್ಲ ಕಡೆಯಿಂದಲೂ ಸಾಕಷ್ಟು ಸಿಟಿ ಬಸ್ಸುಗಳೂ ಇವೆ.

## ದುಬಾರಿ ಪ್ರವೇಶ ಶುಲ್ಕ

ಮ್ಯೂಸಿಯಂ ಪ್ರವೇಶಕ್ಕೆ ದುಬಾರಿ ಎನ್ನಬಹುದಾದ ಶುಲ್ಕವಿದೆ. ಕಾಲ ಕಾಲಕ್ಕೆ ಬೇರೆ ಬೇರೆ ಪ್ರಮಾಣದ ರಿಯಾಯಿತಿಗಳೂ ಇರುತ್ತವೆ. ಸಾಮಾನ್ಯವಾಗಿ ನೇರ ಖರೀದಿಗಿಂತ ಆನ್‌ಲೈನ್ ಬುಕ್ಕಿಂಗ್‌ಗೆ ಹೆಚ್ಚಿನ ರಿಯಾಯಿತಿ ಇರುತ್ತದೆ. ಹೋಗುವಾಗ ಪರಿಶೀಲಿಸಿ ನಿರ್ಧರಿಸಿ. ಎಲ್ಲ ಪ್ರತಿಮೆಗಳನ್ನು ನೋಡಲು ಫೋಟೊ ತೆಗೆದುಕೊಳ್ಳಲು ಸುಮಾರು 2 ರಿಂದ 3 ಗಂಟೆ ಸಮಯ ಬೇಕಾಗುತ್ತದೆ.

ವಿ.ಶ್ರೀನಿವಾಸ

'ಲಂಡನ್‌ನ ಮೇಡಮ್ ಟುಸಾಡ್ಸ್ ಮ್ಯೂಸಿಯಂನಲ್ಲಿ ಅಮಿತಾಭ್ ಬಚ್ಚನ್ , ಸಲ್ಮಾನ್ ಖಾನ್ ಪ್ರತಿಮೆಗಳ ಅನಾವರಣ', ಐಶ್ವರ್ಯ ರೈ ಪ್ರತಿಮೆ ಅನಾವರಣ' ಶಾರುಖ್ ಖಾನ್ ಪ್ರತಿಮೆ ಅನಾವರಣ, 'ಸಚಿನ್ ತೆಂಡೂಲ್ಕರ್ ಪ್ರತಿಮೆ ಅನಾವರಣ' - ಆಗಾಗ್ಗೆ ಇಂಥ ಸುದ್ದಿಗಳನ್ನು ಪತ್ರಿಕೆಗಳಲ್ಲಿ ಓದಿರುತ್ತೇವೆ, ಅಲ್ವಾ ? ಹಾಗೆ ಓದಿದ ಮೇಲೆ ಮ್ಯೂಸಿಯಂ ನೋಡುವ ಬಯಕೆಯಾಗುತ್ತದೆ. ಆದರೆ, ಇವನ್ನೆಲ್ಲ ನೋಡಲು ಲಂಡನ್‌ವರೆಗೆ ಹೋಗಬೇಕಲ್ಲಾ ಎಂಬ ಚಿಂತೆಯೂ ಕಾಡುತ್ತದೆ, ಅಲ್ವಾ ?

ಯೋಚನೆ ಮಾಡಬೇಡಿ. ಈಗ ಅಂಥದ್ದೇ ಒಂದು ಮೇಡಮ್ ಟುಸಾಡ್ಸ್ ಮ್ಯೂಸಿಯಂ ದೆಹಲಿಗೆ ಬಂದಿದೆ. ದೇಶ ವಿದೇಶಗಳ ಖ್ಯಾತನಾಮರ ತದ್ರೂಪು ಮೇಣದ ಪ್ರತಿಮೆಗಳನ್ನು ಅಲ್ಲಿ ನೋಡಬಹುದು. ಬಾಲಿವುಡ್, ಹಾಲಿವುಡ್, ಮ್ಯೂಸಿಕ್ ಲೋಕದ ತಾರೆಗಳು, ಟಿವಿ ಹಾಗೂ ಕ್ರೀಡಾಲೋಕದ ತಾರೆಯರು ಹಾಗೂ ಹಲವು ವಿಶ್ವ ನಾಯಕರ ಪ್ರತಿಮೆಗಳು ಸೇರಿ ಸುಮಾರು 50ಕ್ಕೂ ಹೆಚ್ಚು ಪ್ರತಿಮೆಗಳನ್ನು ಇಲ್ಲಿ ನೋಡಬಹುದು. ಅವುಗಳೊಂದಿಗೆ ಅವರದೇ ಭಂಗಿಗಳಲ್ಲಿ ನಿಂತು ಫೋಟೋಗಳನ್ನು ತೆಗೆದುಕೊಳ್ಳಬಹುದು.

ಡಿಸೆಂಬರ್ 1, 2017 ರಂದು ದೆಹಲಿಯ ಕನ್ನಾಟ್ ಪ್ಲೇಸ್ ನಲ್ಲಿರುವ ರೀಗಲ್ ಬಿಲ್ಡಿಂಗ್ ನ ನಂ.44ನೇ ಸಂಖ್ಯೆಯ ಕಟ್ಟಡದಲ್ಲಿ ಈ ಮ್ಯೂಸಿಯಂ ಆರಂಭವಾಯಿತು. ಈ ಮ್ಯೂಸಿಯಂನಲ್ಲಿ ಬಾಲಿವುಡ್ ವಿಭಾಗದಲ್ಲಿ ಅಮಿತಾಭ್ ಬಚ್ಚನ್, ಅನಿಲ್ ಕಪೂರ್, ದಿಪಿಕಾ ಪಡುಕೋಣೆ, ಹೃತಿಕ್ ರೋಶನ್, ಕರೀನಾ ಕಪೂರ್, ಕತ್ರಿನಾ ಕೈಫ್, ಶಾಹಿದ್ ಕಪೂರ್, ಮಧುಬಾಲ, ಮಾಧುರಿ ದೀಕ್ಷಿತ್, ರಾಜ್‌ಕಪೂರ್, ರಣಬೀರ ಕಪೂರ್,



ಬಾಲಿವುಡ್ ನಟ ಸಲ್ಮಾನ್ ಖಾನ್ ಪ್ರತಿಕೃತಿಯೊಂದಿಗೆ ಪ್ರವಾಸಿಗರು



ಬಾಕ್ಸರ್ ಮೇರಿಕೋಂ ಪ್ರತಿಕೃತಿಯೊಂದಿಗೆ ಪ್ರವಾಸಿಗರು

ಸಲ್ಮಾನ್ ಖಾನ್, ಶಾರುಖ್ ಖಾನ್, ಹಾಗೂ ಸನ್ನಿಲಿಯೋನ್ ಮುಂತಾದ ಪ್ರತಿಮೆಗಳಿವೆ.

ಹಾಲಿವುಡ್ ತಾರೆಯರಾದ ಕೇಟ್ ವಿನ್‌ಸ್‌ಲೆಟ್ (ಟೈಟಾನಿಕ್), ಮರ್ಲಿನ್ ಮನ್ರೋ, ಟಾಮ್ ಕ್ರೂಸ್, ವಿಲ್‌ಸ್ಮಿತ್ ಮುಂತಾದವರ ಪ್ರತಿಮೆಗಳಿವೆ. ಮ್ಯೂಸಿಕ್ ವಿಭಾಗದಲ್ಲಿ ಆಶಾ ಭೋಂಸ್ಲೆ, ಶ್ರೇಯಾ ಘೋಶಾಲ್, ಸೋನು ನಿಗಮ್, ಉಸ್ತಾದ್ ಜಾಕಿರ್ ಹುಸೇನ್ ಹಾಗೂ ಮೈಕೆಲ್ ಜಾಕ್ಸನ್, ಲೇಡಿ ಗಾಗ, ಮಡೋನ್ನಾ ಮುಂತಾದ ಪ್ರತಿಮೆಗಳಿವೆ.

ಕ್ರೀಡಾ ವಿಭಾಗದಲ್ಲಿ ಕಪಿಲ್ ದೇವ್, ಸಚಿನ್ ತೆಂಡೂಲ್ಕರ್ ವಿರಾಟ್ ಕೊಯ್ಲಿ, ಮಿಲ್ಕಾ ಸಿಂಗ್, ಮೇರಿ ಕೋಮ್, ಹಾಗೂ ಲಿಯೋನೆಲ್ ಮೆಸ್ಸಿ, ಉಸೇನ್ ಬೋಲ್ಟ್, ಮುಂತಾದ ಪ್ರತಿಮೆಗಳಿವೆ. ವಿಶ್ವನಾಯಕರ ವಿಭಾಗದಲ್ಲಿ ಮಹಾತ್ಮಾ ಗಾಂಧಿ, ಎ ಪಿ ಜೆ ಅಬ್ದುಲ್ ಕಲಾಂ, ನೇತಾಜಿ, ಭಗತ್ ಸಿಂಗ್, ಸರ್ದಾರ್ ಪಟೇಲ್ , ನರೇಂದ್ರ ಮೋದಿ, ಮುಂತಾದ ಪ್ರತಿಮೆಗಳಿವೆ.

ಇವು ಇಷ್ಟಕ್ಕೇ ಸೀಮಿತವಾಗಿಲ್ಲ. ಆಗಾಗ್ಗೆ ಹೊಸ ಹೊಸ ಪ್ರತಿಮೆಗಳನ್ನು ಸೇರಿಸುತ್ತಲೇ ಇರುತ್ತಾರೆ. ನಾವು ನೋಡಿ ಬಂದ ಮೇಲೆ ಇತ್ತೀಚೆಗೆ ಮಕ್ಕಳ ಮೆಚ್ಚಿನ ಕಾರ್ಟೂನ್ ಪಾತ್ರಗಳಾದ ಮೋಟು ಪತ್ಲು ಪ್ರತಿಮೆಗಳನ್ನು ಅನಾವರಣಗೊಳಿಸಿದ್ದಾರೆ ಎಂಬ ಸುದ್ದಿ ತಿಳಿಯಿತು.

1791 ರಲ್ಲಿ ಜನಿಸಿದ ಮೇರಿ ಟುಸಾಡ್ಸ್ ತನ್ನ 6 ವಯಸ್ಸಿನಲ್ಲಿಯೇ ಮೇಣದ ಕೃತಿಗಳನ್ನು ರಚಿಸುವುದಲ್ಲಿ ಕಲಿಯಲಾರಂಭಿಸಿದಳು. 1835 ರಲ್ಲಿ ಲಂಡನ್‌ನ ಬೇಕರ್ ಸ್ಟ್ರೀಟ್‌ನಲ್ಲಿ ಆರಂಭವಾದ ಮ್ಯೂಸಿಯಂ ಇಂದು ಜಗತ್ ಪ್ರಸಿದ್ಧ ಪ್ರವಾಸಿ ತಾಣವಾಗಿದೆ. ಆಗ ಆಕೆ ತಯಾರಿಸಿದ ಪ್ರತಿಮೆಗಳು ಹಾಗೂ 1842ರಲ್ಲಿ ಆಕೆಯೇ ತನ್ನ ಸ್ವಂತ ಪ್ರತಿಮೆಯನ್ನು ತಯಾರಿಸಿದ್ದು ಈಗಲೂ ಸುಸ್ಥಿತಿಯಲ್ಲಿದೆಯೆಂದರೆ ಆಶ್ಚರ್ಯವೇ ಸರಿ. ಇಂದು ವಿಶ್ವದಾದ್ಯಂತ 23 ಸ್ಥಳಗಳಲ್ಲಿ ಮೇಡಂ ಟುಸಾಡ್ಸ್ ಮ್ಯೂಸಿಯಂಗಳಿವೆ.